ಯಿಂದಲ್ಲ. ಆದುದರಿಂದ ನಿಮ್ಮ ಈ ಭಾವನೆಗಳನ್ನು ಭಾಷೆಯ ಕಟ್ಟುಪಾಡಿಗೆ ಒಳಪಡಿಸದೇ ಈ ಸ್ಥಾನದ ಮೂಲಕ ನಿಮ್ಮೆಲ್ಲರಿಗೆ ಸಮಾಧಾನವಾಗುವ ಹಾಗೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಈ ದಿಸೆಯಲ್ಲಿ ತಮ್ಮ ಸಂಪೂರ್ಣ ಸಹಾಯ ಸಹಕಾರವನ್ನು ನಾನು ಈ ಮೂಲಕ ಕೇಳುತ್ತಿದ್ದೇನೆ. ಬಹುಶಃ ಶಾಸನಸಭೆಯಲ್ಲಿ ಆದರಲ್ಲೂ ವಿಶೇಷವಾಗಿ ಮೇಲ್ಮನೆಯಲ್ಲಿ ಹೆಚ್ಚು ಮಾತನಾಡಿದ ಒಂದು ಫಲವಾಗಿ ಈಗ ಇಲ್ಲಿ ನನಗೆ ಈ ದಿನ ನವ್ನ ಮಾತಿಗೆ ಮೂಗುದಾರ ಹಾಕತಕ್ಕ ರೀತಿಯ ಒಂದು ಕಾರ್ಯವೂ ಇದಂ ಇರ ಬಹುದು. ಅದು ಏನೇ ಇದ್ದರೂ ಈ ಹಿತ ಮಿತ ವ್ಯವಸ್ಥೆಯೊಳಗೆ ಕೆಲಸ ಮಾಡುವುದಕ್ಕೆ ಪ್ರಾಮಾಣಿಕ ವಾದ ಪ್ರಯತ್ನ ಮಾಡುತ್ತೇನೆ. ಈ ವಿಷಯದಲ್ಲಿ ತಮ್ಮೆಲ್ಲರ ಸಹಕಾರವನ್ನು ಮತ್ತೊಮ್ಮೆ ಕೋರಿ ಈ ಸಭೆಯನ್ನು ಮುಂದೂಡುವ ಮುನ್ನ ಅತ್ಯಂತ ವಿಶೇಷವಾದ ಒಂದು ವಿಷಯವನ್ನು ಪ್ರಸ್ತಾಪ ಮಾಡ ಬೇಕೆಂದಿದ್ದೇನೆ. ಕರ್ನಾಟಕ ಶಾಸಕಾಂಗ ಕಾಂಗ್ರೆಸ್-ಐ ಪಕ್ಷದ ನಾಯಕರಾಗಿ ಚುನಾಯಿಸಲ್ಪಟ್ಟಿರತಕ್ಕ ಶ್ರೀಮಾನ್ ವೀರಪ್ಪ ಮೊಯ್ಲಿಯವರಿಂದ ಪತ್ರ ಬಂದಿದೆ. ಈ ಸದನದಲ್ಲಿ ಕಾಂಗ್ರೆಸ್-ಐ ಪಕ್ಷವು ೮೧ ಸದಸ್ಯರ ಸಂಖ್ಯಾಬಲವನ್ನು ಹೊಂದಿದೆ. ಆದುದರಿಂದ ಸದನದಲ್ಲಿ ಕಾಂಗ್ರೆಸ್-ಐ ಪಕ್ಷವನ್ನು ವಿರೋಧಿ ಪಕ್ಷವೆಂದೂ ಶ್ರೀಮಾನ್ ವೀರಪ್ಪ ಮೊಯ್ಲಿಯವರನ್ನು ವಿರೋಧಿ ಪಕ್ಷದ ನಾಯಕರೆಂದು ಈ ತಕ್ಷಣ ದಿಂದಲೇ ಮಾನ್ಯ ಮಾಡಿದ್ದೇನೆ. ಈ ದಿವಸ ಐದು ಗಂಟೆಗೆ ಜಂಟೀ ಅಧಿವೇಶನ ಸೇರುತ್ತದೆ. ಜಂಟೀ ಅಧಿವೇಶನ ಸೇರುವವರೆವಿಗೂ ಈ ಸಭೆಯನ್ನು ಮುಂದೂಡಲಾಗಿದೆ.

ಸಭೆಯಂ ಮೂರು ಘಂಟೆ ಇಪ್ಪತ್ತೈದು ನಿಮಿಷಗಳಿಗೆ ಮುಂಕ್ತಾಯವಾಗಿ ಪುನಃ ಜಂಟೀ ಅಧಿವೇಶನಕ್ಕಾಗಿ ಐದು ಘಂಟೆಗೆ ಸೇರಲು ನಿಶ್ಚಯಿಸಿತು.

KARNATAKA LEGISLATURE SECRETARIAT

Address by Sri Govind Narain, Governor of Karnataka, to the Karnataka Legislative Assembly and the Karnataka Legislative Council, assembled together at the Assembly Chamber, Vidhana Soudha, at Five of the Clock.

Monday, the 24th January, 1983

(Magha 4, 1904 Saka)

The Governor arrived at the portico near the Northern entrance to the Vidhana Soudha at Fifty Five Minutes past Five of the Clock On alighting from his ear, the Governor was received by Hon'ble Speaker, Hon'ble Chairman and the Secretary, Karnataka Legislature. The Governor was led to the lift on the northern wing. On emerging from the lift, on the first floor, a procession was formed in the following order :

SECRETARY

Hon'ble Speaker — Hon'ble Chairman

THE GOVERNOR

(Aid-de-camp)

The procession in this form wended its way to the Legislative Assembly Chamber. As soon as the procession arrived at the entrance to the Assembly Chamber, the arrival of the Governor was announced by the Marshal. National Anthem was played. When the Governor entered the Chamber and until he took his seat on the dais, the Hon'ble Members remained standing.

On reaching the floor of the House in front of the dais, the procession bifurcated. On the dais, the Hon'ble Speaker sat on the Governor's right and the Hon'ble Chairman on the Governors left, the Governor occupied the central seat.

The Secretary took his seat in the chair in front of the dais.

SRI MANE RAJBAHU SHANKAR RAO (Belgaum).—At the outset, I request the Governor of this State to persuade the Government of Karnataka to take up the boundary dispute question on top priority and come to a final conclusion. You ore aware that the Maharashtra Ekikaran Samithi has been winning all the elections since the inception of this State for the sixth time in the succession and we have been returning with thumping majority.

(INTERRUPTION)

HIS EXCELLENCY THE GOVERNOR : Order, order.

* * *

(INTERRUPTION)

HIS EXCELLENCY THE GOVERNOR : Order, order.

(All the Hon. Members belonging to M.E.S. Party withdrew from the House)

ಮಾನ್ಯ ರಾಜ್ಯಪಾಲರು.—ಮಾನ್ಯ ಸಭಾಪತಿಯವರೆ, ಮಾನ್ಯ ಅಧ್ಯಕ್ಷರೆ ಮತ್ತು ವಿಧಾನ ಮಂಡಲದ ಮಾನ್ಯ ಸದಸ್ಯರೆ,

ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ಹೊಸ ಸದಸ್ಯರಾದ ನಿಮ್ಮನ್ನೆಲ್ಲ ಸ್ವಾಗತಿಸಿ ತಮಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಬಯಸುತ್ತ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ರಾಜ್ಯ ವಿಧಾನ ಸಭೆಗೆ ನಿಷ್ಪಕ್ಷಪಾತ ರೀತಿಯಲ್ಲಿ ಹಾಗೂ ಶಾಂತಿಯುತವಾಗಿ ಚುನಾವಣೆಗಳು ನಡೆದಿರುವುದು ಶುಭ ಸಂಕೇತ.

ರಾಜ್ಯದ ಅನೇಕ ಜಿಲ್ಲೆಗಳು ಪ್ರವಾಹದ ಪ್ರಕೋಪಕ್ಕೆ ಒಳಗಾಗಿದ್ದವು ಮತ್ತು ೧೬ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಇನ್ನೂ ಮುಂದುವರಿದಿದೆ. ಆದರೂ ಪರಿಸ್ಥಿತಿ ಈಗ ಹತೋಟಿಯಲ್ಲಿದೆ ಮತ್ತು ಈಗಾಗಲೇ ಪ್ರಾರಂಭಿಸಲಾದ ಪರಿಹಾರ ಕಾರ್ಯಗಳು ಅಗತ್ಯ ವಿರುವೆಲ್ಲೆಲ್ಲ ಮುಂದುವರಿಯುತ್ತಿವೆ.

The State's Annual Plan for 1982–83 which had originally an outlay of Rs. 475 crores had later been increased to Rs. 504 crores in order to keep up the tempo of progress in key sectors like agriculture, industries and welfare of Scheduled Castes/Scheduled

Tribes and Backward Classes. A number of World Bank aided programmes have also been under execution and have shown reasonably satisfactory progress.

The avowed policy of my Government is to strengthen real Democratic values as enshrined in the Constitution and to enable people's representatives to participate effectively in the various units of administration whether they are at the District, Taluk and Village levels, in local bodies, cooperative institutions and such organisations. Towards this objective, my Government will do its best to take such steps as are necessary to involve people's representatives as soon as possible It is also the aim of this Government to give to the people a clean, efficient and effective administration which is responsive to people's aspirations and needs.

As members are aware, already announcements concerning elections to Municipal Corporations, Municipalities, Taluka Boards, Village Panchayats, Market Committees and Co-operative Institutions have been made.

I would like to emphasise my Government's strong and unshakeble commitment to the Freedom of Press as it is only when such freedom is assured that democratic institutions can flourish. As long as expression of views-including criticism of Government and its policies takes place in a peaceful and orderly manner there would be no question of placing any restrictions on the freedom of different sections of society including workers, farmers and students to organise themselves and give expression to their opinion, beliefs and ideas in any form or through any media.

The priorities of my Government would include steps to remove rural unemployment. Justice to SCs/STs. Minorities and other weaker sections of the society decentralisation of powers, elimination of corruption, both administrative and political and steps to bring down the prices of essential commodities.

I would now like to mention some of the policies and programmes, which my Government proposes to implement.

My Government is contemplating the introduction of a Bill prohibiting defections. The Government would also like Karnataka to be a State of experiment for electoral reforms, which the Election Commission might have in mind. In reiterating the Government's objective to provide clean administration which would be free from corruption and favouritism at all levels, I would like to mention that already a decision has been taken to set up the institution of Lok Ayukta whose ambit would cover all levels of decision making authorities, including the Chief Minister.

My Government proposes to create an advisory council consisting of experts in various disciplines relating to economic and social development and planning. This Council will function as a 'Think tank' of the Government enabling it to draw upon such expertise to formulate innovative and imaginative schemes for the rapid development of the State in all directions. The progress of planning will also thus have a practical bias. My Government is confident of drafting the best talent for this Council.

My Government will constitute a Minorities Commission to go into the problems faced by the minorities and to ensure that all the constitutional guarantees given to the minorities are fulfilled and all their grievances are redressed. The Commission would be asked to, suggest measures to create a situation in which the minorities have no apprehension of any kind will have a sense of security and feeling that their interests will never be in jeopardy.

My Government would also take effective steps to implement all the recommendations of the Scheduled Castes and Scheduled Tribes Commission. Several of these recommendations have, in the past, either not been implemented or have not been implemented to the fullest measure. My Government is determined to fulfil all its obligations to the Scheduled Castes and Scheduled Tribes and create a sense of belonging amongst them, so that they know that this Government is their own Government and that they need not have any fear of their rights being trampled upon with impunity by any one.

My Government will take effective steps to implement the provisions of the Civil Rights Protection Act and, in that direction, devise measures to see that the Scheduled Castes and Scheduled Tribes population, particularly, in the rural areas is not inhibited from bringing to the notice of the authorities any injustice done to them. The Government will firmly put down any attempt to harass the members of the Scheduled Castes and other under-privileged communities and make certain that the atrocities on harijans will be a thing of the past. The senior Government Officers such as the Deputy Commissioners and the Superintendents of Police would be given strict instructions to be always on the alert and to see that the members of the Scheduled Castes, other vulnerable sections and minorities have the fullest sense of security and feel free to carry on their avocations in a normal manner. These senior Officers' work would be judged on the basis of the confidence they would be able to create in the minds of these people. Looking after the welfare and safety of the people belonging to these communities would be their Primary duty.

My Government will strive to give distributive justice to the Backward Classes and will urge the Central Government to accept and implement the recommendations of the Mandal Commission.

My Government will give the highest priority to tackling the problem of rural unemployment. For this purpose my Government proposes to re-organise the Land Army, so as to provide work to all able bodied persons, who want to work in the rural areas. At the same time, this would result in the creation of durable assets, which will benefit the rural community. The Land Army Organisation will be made full use of in the re-settlement and rehabilitation of bonded labour. This problem of resettlement of the large body of bonded labour will have to be solved under a time-bound programme.

My Government will pay special attention to solving the problems represented to the Government by the farmers' organisations, from time, which have not received the due attention so far. These problems which include the question of giving remunerative prices, procurement policy, levies and taxes on agricultural commodities, reduction of costs of agricultural inputs and so on. would be looked into and every attempt will be made to solve them at the earliest. Towards solving these problems, my Government has already initiated a dialogue with the representatives of the farmers' organisations.

Kannada will have primacy at all levels of administration. Bills coming before the Legislature will be prepared also in Kannada. Government employees who do not know Kannada will have to learn the language within the time limit prescribed by the Government. The Karnataka Public Service Commission will be asked to initiate steps to see that its examinations are conducted in Kannada. Employees whose mother tongue is not Kannada and who attain special proficiency in Kannada will be given due recognition.

Attempts will be made to teach Kannada to everyone from the kindergarten onwards and steps will be taken to introduce Kannada medium at post-graduate levels also. No encouragement will be given in future to English medium schools. Special facilities will also be given for starting Kannada medium schools. All the minority languages spoken in the State will be given full protection.

All facilities will be extended to those whose mother tongue is Urdu, Tamil, Telugu, Malayalam, Marathi, Gujarathi, Hindi or any other Indian language to have their education both in the primary and secondary stages in their own mother tongue. My Government undertakes to guarantee in spirit and substance all the rights and protection given by the Constitution to the linguistic and other minorities.

The Employment Exchanges will be streamlined by the introduction of the use of computers. All the complaints regarding their mismanagement will be removed. The Employment Exchanges will be the centres not merely for registration of the employment seekers but will also be centres to give guidance and employment counselling to the youths registered with such exchanges.

A large number of our young people who have come out of colleges and high schools are without jobs Unfortunately, our State has not been able to secure its legitimate share of the national job market which includes jobs under the Union Government in Railways, Posts and Telegraphs, Armed Forces, Para-Military Forces, etc., and in the Central Public Sector Undertakings located in our State. My Government will take steps for providing guidance and training to our young people so that they can effectively compete with others and get the jobs which are their due.

The present practice of various labour disputes dragging on for months together will not be allowed to continue. Every effort will be made to resolve such disputes expeditiously and within a specific time limit. My Government expects that in its efforts towards this goal, the labour unions and the representatives of the labour will give their whole-hearted cooperation recognising the fact that increased production and increase in the size of the cake is the best solution for all labour problems.

My Government believes in the philosophy of development of Mahatma Gandhi who wanted to wipe every tear from every eye. It is with this objective that my Government will implement the programme of 'Antyodaya' which seeks to lift the poorest among the poor above the poverty line. My Government will pursue vigorously such National Schemes as are designed in the interest of the poor people. Besides, special and specific programmes of upliftment of the weaker Sections of the Society will be formulated and implemented by my Government.

The Implementation of Land Reforms has not yet been completed because of a large number of pending Writ Petitions. Likewise, it has not been possible to complete the distribution of surplus lands because of stay Orders from the Courts. It would be our effort to see that these litigations are finalised as soon as possible and to ensure that the object of Land Reforms Legislation is completely achieved in the shortest time span possible.

The rise in the prices of essential commodities is a matter of great concern to my Government. It will take measures to make available food-grains and other essential commodities to the public

in adequate quantities and at reasonable prices through the public distribution system. For this purpose, the public distribution system will be enlarged and streamlined.

My Government attaches the highest importance to timely completion of public works programmes such as roads, bridges, buildings and irrigation and power projects. It is common experience that despite provision of adequate finances and though year after year such provisions are fully spent the benefits derived from such investments are not commensurate with the expenditure incurred. My Government would like to make those responsible for execution of projects conscious of cost-benefit factors and function in such a way that the ultimate benefits of investments made are both tangible and are available in time. Towards this objective, my Government would concentrate on completion of all the on going projects whether they are roads, bridges, buildings, irrigation reservoirs or Power plants so that time and cost over-runs are avoided and the huge sums spent on them start yielding benefits to the public. Not only will action to complete major and medium irrigation projects be intensified but attention will also be paid to the exploitation of minor irrigation and ground water resources to the fullest extent.

Because of our dependence on hydro-electric generation, power cuts including the recent one have become inevitable. In order to overcome this situation my Government would like to encourage captive power generation by industrial units and to introduce energy conservation measures. My Government would consider providing attractive incentive schemes to promote these concepts. My Government would consider p'oviding attractive incentive schemes to promote these concepts. My Government would also persuade the Government of India to establish a nuclear power plant in the State for which preliminary surveys have already taken place. It is my Government's intention to set up a large number of micro and mini hydel plants in order to utilise all the available soarces of cheaper energy. My Government will encourage pilot experiments in using non-conventional sources of energy such as bio-gas, solar energy, etc.

Government will give particular emphasis to development of Cottage, Small and Medium and Agro-based Industries as these provide the largest employment at the least cost. Special efforts will be made for creating opportunities for self-employment.

Policies of Government are implemented through the administrative machinery. My Government will take all necessary steps to instil in its officials a sense of devotion, h nesty and commitment to the service of the people so that the administrative machinery

becomes a fit and effective instrument for implementation of the programmes of my Government.

In our federal set up, the Governments in the States and at the Centre need not always belong to the same party. Though the two Governments may be from different parties, it is yet both desirable and possible to have mutual co-operation and understanding. My Government will seek co-operation from the Government of India for achieving the basic objective of serving the people.

Bills to replace the Ordinances promulgated after the last session of the Legislature and other Bills which the Government may consider necessary will be placed before you for consideration.

Hon'ble Members, I have been in Karnataka for nearly 5½ years and I may soon be returning to Delhi. Throughout my tenure, the people of Karnataka in all walks of life, have given us their love and affection in abundant measure. My wife and I will carry with us very happy memories of our stay here. We have derived a great deal of a satisfaction with our deep involvement with the problems of the people of the State whose service was my first duty, ಕರ್ನಾಟಕ ವಿಧಾನ ಮಂಡಲದ ಹಿಂದಿನ ಮತ್ತು ಇಂದಿನ ಮಾನ್ಯ ಸದಸ್ಯರು ನನ್ನ ಅಧಿಕಾರಾವಧಿಯು ಕಾಲದಲ್ಲಿ ನನಗೆ ನೀಡಿದ ಸಹಕಾರ, ನನಗೆ ತೋರಿದ ಗೌರವ ಹಾಗೂ ವಾತ್ಸಲ್ಯಗಳ ಬಗ್ಗೆ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಿಮಗೂ, ಕರ್ನಾಟಕದ ಸಮಸ್ತ ಜನತೆಗೂ ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ರಾಜ್ಯವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದೂ, ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತವಾಗಿ ಮುನ್ನಡೆಯಲೆಂದೂ, ತನ್ಮೂಲಕ ರಾಜ್ಯದ ಜನತೆಯ, ವಿಶೇಷತಃ ಬಡವರ, ಸಮಾಜದ ದೀನ ದಲಿತರ ಆಶೋತ್ತರಗಳು ಈಡೇರಲೆಂದೂ ನಮ್ಮ ನಿರಂತರ ಬಯಕೆ. ದೇವರು ನಮ್ಮ ಕಾರ್ಯಕಲಾಪಗಳಲ್ಲಿ ನಮಗೆ ಮಾರ್ಗದರ್ಶನ ನೀಡಲಿ.

ಜೈಹಿಂದ್

(The Address concided at 5-30 P. M,)

(ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ಭಾಷಾಂತರ)

ಮಾನ್ಯ ಸಭಾಪತಿಯವರೆ, ಮಾನ್ಯ ಅಧ್ಯಕ್ಷರೆ ಮತ್ತು ವಿಧಾನಮಂಡಲದ ಮಾನ್ಯ ಸದಸ್ಯರೆ.

ರಾಜ್ಯ ವಿಧಾನಮಂಡಲದ ಈ ಜಂಟಿ ಅಧಿವೇಶನಕ್ಕೆ ಹೊಸ ಸದಸ್ಯರಾದ ನಿಮ್ಮನ್ನೆಲ್ಲ ಸ್ವಾಗತಿಸಿ ತವಂಗೆಲ್ಲರಿಗೂ ಹೊಸ ವರ್ಷದ ಶುಭಾಶಯಗಳನ್ನು ಬಯಸುತ್ತ ನನ್ನ ಭಾಷಣವನ್ನು ಪ್ರಾರಂಭಿಸುತ್ತೇನೆ. ರಾಜ್ಯ ವಿಧಾನ ಸಭೆಗೆ ನಿಷ್ಪಕ್ಷಪಾತ ರೀತಿಯಲ್ಲಿ ಹಾಗೂ ಶಾಂತಿಯುತವಾಗಿ ಚುನಾವಣೆಗಳು ನಡೆದಿರುವುದು ಶುಭ ಸಂಕೇತ.

ರಾಜ್ಯದ ಅನೇಕ ಜಿಲ್ಲೆಗಳು ಪ್ರವಾಹದ ಪ್ರಕೋಪಕ್ಕೆ ಒಳಗಾಗಿದ್ದವು ಮತ್ತು ೧೬ ಜಿಲ್ಲೆಗಳಲ್ಲಿ ಕ್ಷಾಮ ಪರಿಸ್ಥಿತಿ ಇನ್ನೂ ಮುಂದುವರಿದಿದೆ. ಆದರೂ ಪರಿಸ್ಥಿತಿ ಈಗ ಹತೋಟಿಯಲ್ಲಿದೆ ಮತ್ತು ಈಗಾಗಲೇ ಪ್ರಾರಂಭಿಸಲಾದ ಪರಿಹಾರ ಕಾರ್ಯಗಳು ಅಗತ್ಯವಿರುವಲ್ಲೆಲ್ಲ ಮುಂದುವರಿಯುತ್ತಿವೆ.

ರಾಜ್ಯದ ೧೯೮೨-೮೩ರ ವಾರ್ಷಿಕ ಯೋಜನಾ ಕಾರ್ಯಕ್ರಮಗಳಿಗೆ ಮೊದಲು ೪೭೫ ಕೋಟಿ ರೂಪಾಯಿ ವೆಚ್ಚಕ್ಕೆ ಏರ್ಪಾಡು ಮಾಡಲಾಗಿತ್ತು. ಪ್ರಮುಖ ವಲಯಗಳಾದ ಕೃಷಿ, ಕೈಗಾರಿಕೆ ಮತ್ತು ಹರಿಜನ-ಗಿರಿಜನ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿಯನ್ನು ಮುಂದು ವರಿಸಿಕೊಂಡು ಹೋಗುವ ಸಲುವಾಗಿ ಈ ವೆಚ್ಚವನ್ನು ೫೦೪ ಕೋಟಿ ರೂಪಾಯಿಗೆ ಏರಿಸಲಾಯಿತು, ವಿಶ್ವ ಬ್ಯಾಂಕ್ ನೆರವಿನ ಅನೇಕ ಯೋಜನೆಗಳ ಕಾರ್ಯ ಮುಂದುವರಿಯುತ್ತಿದೆ ಮತ್ತು ಆ ಕಾರ್ಯಕ್ರಮಗಳ ಪ್ರಗತಿ ಸಾಕಷ್ಟು ತೃಪ್ತಿಕರವಾಗಿದೆ.

ಭಾರತ ಸಂವಿಧಾನದಲ್ಲಿ ಅಡಕವಾಗಿರುವ ವಾಸ್ತವ ಜನತಂತ್ರ ಮೌಲ್ಯಗಳನ್ನು ಬಲ ಪಡಿಸುವುದು, ಜಿಲ್ಲೆ, ತಾಲೂಕು ಮತ್ತು ಗ್ರಾಮ ಮಟ್ಟಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಸಹಕಾರ ಸಂಘ ಸಂಸ್ಥೆಗಳೇ ಮುಂತಾದ ಸಂಸ್ಥೆಗಳ ಆಡಳಿತದ ವಿವಿಧ ಸ್ತರಗಳಲ್ಲಿ ಜನತಾ ಪ್ರತಿನಿಧಿಗಳು ಪರಿಣಾಮಕಾರಿ ಯಾಗಿ ಭಾಗವಹಿಸುವಂತೆ ಅನುಕೂಲ ಕಲ್ಪಿಸಿಕೊಡುವುದು ನನ್ನ ಸರ್ಕಾರದ ಮೂಲ ಧ್ಯೇಯವಾಗಿದೆ. ಈ ಧ್ಯೇಯ ಸಾಧನೆಗಾಗಿ ಜನತಾ ಪ್ರತಿನಿಧಿಗಳು ಆಡಳಿತದಲ್ಲಿ ಭಾಗವಹಿಸುವಂತೆ ಮಾಡಲು ಅಗತ್ಯವಿರುವ ಸಕಲ ಕ್ರಮಗಳನ್ನು ನನ್ನ ಸರ್ಕಾರವು ಸಾಧ್ಯವಾದಷ್ಟು ಬೇಗನೆ ಕೈಕೊಳ್ಳಲಿದೆ. ಜನತೆಯ ಆಶೋತ್ತರಗಳನ್ನು ಮತ್ತು ಅಗತ್ಯಗಳನ್ನು ಈಡೇರಿಸುವಂಥ ಸ್ವಚ್ಛ, ದಕ್ಷ ಮತ್ತು ಪರಿಣಾಮಕಾರಿ ಆಡಳಿತವನ್ನು ಒದಗಿಸುವುದೂ ನನ್ನ ಸರ್ಕಾರದ ಧ್ಯೇಯ.

ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಮುನಿಸಿಪಲ್ ಕಾರ್ಪೊರೇಷನುಗಳು, ಮುನಿಸಿಪಾಲಿಟಿಗಳು, ತಾಲೂಕು ಮಂಡಲಿಗಳು, ಗ್ರಾಮ ಪಂಚಾಯಿತಿಗಳು, ವಾಣಿಜ್ಯ ಸಮಿತಿಗಳು ಮತ್ತು ಸಹಕಾರ ಸಂಘ ಸಂಸ್ಥೆಗಳಿಗೆ ಚುನಾವಣೆ ನಡೆಸಲಾಗುವುದೆಂದು ಈಗಾಗಲೇ ಘೋಷಿಸಲಾಗಿದೆ.

ಪತ್ರಿಕಾ ಸ್ವಾತಂತ್ರ್ಯದ ನೀತಿಗೆ ನನ್ನ ಸರ್ಕಾರವು ದೃಢವಾದ ಹಾಗೂ ನಿಶ್ಚಲವಾದ ಬೆಂಬಲ ನೀಡುವುದಾಗಿ ಒತ್ತಿ ಹೇಳಬಯಸುತ್ತೇನೆ. ಏಕೆಂದರೆ ಪತ್ರಿಕಾ ಸ್ವಾತಂತ್ರ್ಯವನ್ನು ಕಾಪಾಡಿಕೊಂಡು ಬಂದಾಗ ಮಾತ್ರವೇ ಪ್ರಜಾಸತ್ತಾತ್ಮಕ ಸಂಘ ಸಂಸ್ಥೆಗಳು ಪರಿಪೂರ್ಣವಾಗಿ ವಿಕಸನ ಹೊಂದುವುದು ಸಾಧ್ಯ. ಸರ್ಕಾರ ಮತ್ತು ಅದರ ಕಾರ್ಯನೀತಿಯ ಸಂಬಂಧದಲ್ಲಿ ಟೀಕೆಯೇ ಮುಂತಾದ ಅಭಿ ಪ್ರಾಯಗಳ ಅಭಿವ್ಯಕ್ತಿ ಶಾಂತಿ ಹಾಗೂ ಸಂಯಮಗಳಿಂದ ನಡೆಯಬೇಕು. ಹೀಗಾದಾಗ ಕಾರ್ಮಿಕರು, ರೈತರು ಮತ್ತು ವಿದ್ಯಾರ್ಥಿಗಳೂ ಸೇರಿದಂತೆ ಸಮಾಜದ ವಿವಿಧ ವರ್ಗಗಳವರು ಸಂಘಟಿತರಾಗಿ ಯಾವುದೇ ರೀತಿಯಲ್ಲಿ ಅಥವಾ ಯಾವುದೇ ಮಾಧ್ಯಮದ ಮೂಲಕ ತಮ್ಮ ಅಭಿಪ್ರಾಯ, ನಂಬಿಕೆ ಮತ್ತು ಧ್ಯೇಯೋದ್ದೇಶಗಳನ್ನು ತಿಳಿಯಪಡಿಸುವ ಸ್ವಾತಂತ್ರ್ಯದ ಮೇಲೆ ಯಾವುದೇ ನಿರ್ಬಂಧವನ್ನು ಹೇರುವ ಪ್ರಶ್ನೆ ಉದ್ಭವಿಸುವುದಿಲ್ಲ.

ನನ್ನ ಸರ್ಕಾರವು ಗ್ರಾಮೀಣ ನಿರುದ್ಯೋಗ ನಿವಾರಣೆ, ಹರಿಜನ/ಗಿರಿಜನ, ಅಲ್ಪಸಂಖ್ಯಾತರ, ಮತ್ತು ಸಮಾಜದ ಇತರ ದುರ್ಬಲ ವರ್ಗಗಳವರಿಗೆ ನ್ಯಾಯ, ಅಧಿಕಾರದ ವಿಕೇಂದ್ರೀಕರಣ, ಆಡಳಿತ

ಹಾಗೂ ರಾಜಕೀಯ ಪಲಯಗಳಲ್ಲಿ ಭ್ರಷ್ಟಾಚಾರ ನಿರ್ಮೂಲನ ಮಂತ್ರ ಆಗತ್ಯ ವಸ್ತುಗಳ ಬೆಲೆ ಇಳಿಸುವುದೇ ಮುಂತಾದ ಕಾರ್ಯಕ್ರಮಗಳಿಗೆ ಆದ್ಯತೆ ನೀಡಲಿದೆ.

ನನ್ನ ಸರ್ಕಾರವು ಕಾರ್ಯಗತಗೊಳಿಸಬೇಕೆಂದಿರುವ ಕೆಲವು ಕಾರ್ಯನೀತಿ ಮತ್ತು ಕಾರ್ಯಕ್ರಮಗಳನ್ನು ಕುರಿತು ಹೇಳಬಯಸುತ್ತೇನೆ.

ಪಕ್ಷಾಂತರ ನಿಷೇಧದ ಸಲುವಾಗಿ ವಿಧೇಯಕವೊಂದನ್ನು ಮಂಡಿಸಲು ನನ್ನ ಸರ್ಕಾರವು ಉದ್ದೇಶಿಸಿದೆ. ಚುನಾವಣಾ ಆಯೋಗದವರ ಲಕ್ಷ್ಯದಲ್ಲಿರಬಹುದಾದಂಥ ಚುನಾವಣಾ ಸುಧಾರಣೆಗಳನ್ನೂ ಪ್ರಯೋಗಕ್ಕೆ ತರುವಲ್ಲಿ ಕರ್ನಾಟಕವೇ ಪ್ರಥಮ ರಾಜ್ಯವಾಗಬೇಕೆಂಬುದೂ ನನ್ನ ಸರ್ಕಾರದ ಆಶಯ. ಎಲ್ಲ ಮಟ್ಟಗಳಲ್ಲೂ ಭ್ರಷ್ಟಾಚಾರ ಮತ್ತು ಪಕ್ಷಪಾತದಿಂದ ಮುಕ್ತವಾದ ಸ್ವಚ್ಛ ಆಡಳಿತವನ್ನು ಒದಗಿಸುವ ಉದ್ದೇಶಕ್ಕಾಗಿ ಲೋಕಾಯುಕ್ತ ಪ್ರಾಧಿಕಾರವನ್ನು ರಚಿಸಬೇಕೆಂದು ನನ್ನ ಸರ್ಕಾರವು ಈಗಾಗಲೇ ನಿರ್ಧಾರ ಕೈಕೊಂಡಿದೆ. ಈ ಲೋಕಾಯುಕ್ತ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಗೆ ಮುಖ್ಯ ಮಂತ್ರಿಗಳೂ ಸೇರಿದಂತೆ ಎಲ್ಲ ಮಟ್ಟಗಳಲ್ಲಿ ತೀರ್ಮಾನ ಕೈಕೊಳ್ಳುವ ಅಧಿಕಾರಿಗಳು ಒಳಪಡುತ್ತಾರೆ.

ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಮತ್ತು ಯೋಜನೆ—ಇವುಗಳಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಪರಿಣಿತರಾದವರನ್ನು ಒಳಗೊಂಡ ಒಂದು ಸಲಹಾ ಪರಿಷತ್ತನ್ನು ರಚಿಸುವ ಬಗ್ಗೆ ನನ್ನ ಸರ್ಕಾರ ಪ್ರಸ್ತಾವಿಸಿದೆ. ಈ ಸಂಸ್ಥೆ ಸರ್ಕಾರದ "ಆಲೋಚನಾ ಬ್ಯಾಂಕ್" ಆಗಿದ್ದುಕೊಂಡು, ಎಲ್ಲ ಕ್ಷೇತ್ರಗಳಲ್ಲಿ ರಾಜ್ಯದ ತ್ವರಿತ ಅಭಿವೃದ್ಧಿಯ ಸಲುವಾಗಿ ವಿನೂತನ ಹಾಗೂ ಕಲ್ಪನಾತ್ಮಕ ಕಾರ್ಯಯೋಜನೆಗಳನ್ನು ರೂಪಿಸುವ ಕಾರ್ಯದಲ್ಲಿ ಸರ್ಕಾರಕ್ಕೆ ನೆರವಾಗುವುದು. ಇದರಿಂದಾಗಿ ಯೋಜನಾ ಕಾರ್ಯನಿರ್ವಹಣೆಗೆ ಒಂದು ಕಾರ್ಯಸಾಧ್ಯ ಬುನಾದಿ ದೊರೆಯುತ್ತದೆ, ನನ್ನ ಸರ್ಕಾರವು ಈ ಪರಿಷತ್ತಿಗೆ ಅತ್ಯಂತ ಪ್ರತಿಭಾವಂತರ ಸೇವೆಯನ್ನು ಪಡೆದುಕೊಳ್ಳುವ ಭರವಸೆ ಹೊಂದಿದೆ.

ನನ್ನ ಸರ್ಕಾರವು ಅಲ್ಪಸಂಖ್ಯಾತರು ಇದಿರಿಸುತ್ತಿರುವ ಸಮಸ್ಯೆಗಳ ಅಧ್ಯಯನ ನಡೆಸುವುದಕ್ಕೂ ಸಂವಿಧಾನದಲ್ಲಿ ಅಲ್ಪಸಂಖ್ಯಾತರಿಗೆ ನೀಡಲಾದ ಭರವಸೆಗಳನ್ನು ಪರಿಪಾಲಿಸಿ ಅವರ ಎಲ್ಲ ಸಂಕಷ್ಟಗಳ ನಿವಾರಣೆಯನ್ನು ಖಚಿತಪಡಿಸಿಕೊಡುವುದಕ್ಕೂ ಅಲ್ಪಸಂಖ್ಯಾತರ ಆಯೋಗ ಒಂದನ್ನು ರಚಿಸಲಿದೆ. ಅಲ್ಪಸಂಖ್ಯಾತರಿಗೆ ಯಾವುದೇ ರೀತಿಯ ಭೀತಿ ಇರದಂಥ ಅವರಲ್ಲಿ ಭದ್ರತಾ ಮನೋಭಾವನೆ ಮೂಡುವಂಥ ಮತ್ತು ಅವರ ಹಿತಾಸಕ್ತಿಗೆ ಎಂದಿಗೂ ಧಕ್ಕೆಯಾಗಲಾರದೆಂಬ ಭರವಸೆಯ ಭಾವನೆ ಅವರಲ್ಲಿ ಮೂಡುವಂಥ ಪರಿಸ್ಥಿತಿಯನ್ನು ನಿರ್ಮಿಸಲು ಆಗತ್ಯವಿರುವ ಕ್ರಮಗಳನ್ನು ಸೂಚಿಸಲು ಆಯೋಗವನ್ನು ಕೇಳಿಕೊಳ್ಳಲಾಗುವುದು.

ನನ್ನ ಸರ್ಕಾರವು ಹರಿಜನ/ಗಿರಿಜನ ಆಯೋಗದ ಎಲ್ಲ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಪರಿಣಾಮಕಾರಿ ಕ್ರಮಗಳನ್ನು ಕೂಡ ಕೈಕೊಳ್ಳುವುದು. ಈ ಹಿಂದೆ ಈ ಶಿಫಾರಸುಗಳ ಪೈಕಿ ಹಲವಾರು ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಿರಲಿಲ್ಲ ಅಥವಾ ಪೂರ್ಣ ಪ್ರಮಾಣದಲ್ಲಿ ಕಾರ್ಯಗತಗೊಳಿಸಿರಲಿಲ್ಲ. ಹರಿಜನ/ಗಿರಿಜನರ ಬಗ್ಗೆ ತನ್ನೆಲ್ಲ ಹೊಣೆಗಾರಿಕೆಗಳನ್ನು ನಿರ್ವಹಿಸಲು ನನ್ನ ಸರ್ಕಾರವು ನಿರ್ಧರಿಸಿದೆ ಮತ್ತು ಈ ಸರ್ಕಾರವು ತಮ್ಮದೇ ಸರ್ಕಾರವೆಂಬ ನಂಬಿಕೆ, ತಮ್ಮ ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸುವ ಯಾರಿಗೆ ಆಗಲಿ ದಾಡನೆಯಿಂದ ವಿನಾಯಿತಿ ದೊರಕದೆಂಬ ವಿಶ್ವಾಸ ಮೂಡಿ ತಾವೆಲ್ಲ ಇಡೀ ಸಮಾಜಕ್ಕೆ ಸೇರಿದವರೆಂಬ ಭಾವನೆ ಅವರಲ್ಲಿ ಒಡಮೂಡುವಂತೆ ಮಾಡಲು ನನ್ನ ಸರ್ಕಾರ ದೃಢಸಂಕಲ್ಪ ಮಾಡಿದೆ.

ನಾಗರಿಕ ಹಕ್ಕುಗಳ ರಕ್ಷಣಾ ವಿಧಿನಿಯಮದ ಉಪಬಂಧಗಳನ್ನು ಜಾರಿಗೆ ತರಲು ನನ್ನ ಸರ್ಕಾರವು ಪರಿಣಾಮಕಾರಿ ಕ್ರಮ ಕೈಕೊಳ್ಳಲಿದೆ. ಆ ದಿಸೆಯಲ್ಲಿ, ಹರಿಜನ ಗಿರಿಜನರಿಗೆ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಪ್ರದೇಶಗಳಲ್ಲಿರುವವರಿಗೆ ಆಗಿರುವ ಯಾವುದೇ ಅನ್ಯಾಯವನ್ನು ಅಧಿಕಾರಿಗಳ ಗಮನಕ್ಕೆ ತರುವಲ್ಲಿ ಯಾವುದೇ ಅಂಜಿಕೆ ಇರದಂಥ ಪರಿಸರವನ್ನು ಕಲ್ಪಿಸಲು ಸೂಕ್ತ ಕ್ರಮಗಳನ್ನು ರೂಪಿಸಲಿದೆ. ಹರಿಜನ/ಗಿರಿಜನರು ಮತ್ತು ಇತರ ದೀನದಲಿತರಿಗೆ ಹಿಂಸೆ ಕೊಡುವಂಥ ಯಾವುದೇ ಪ್ರಯತ್ನವನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕುವುದಲ್ಲದೆ ಹರಿಜನ/ಗಿರಿಜನರ ಮೇಲಣ ದೌರ್ಜನ್ಯ ಕೇವಲ ಗತಕಾಲದ ಘಟನೆ ಎನ್ನಿಸುವಂತೆ ಉಚಿತ ಕ್ರಮ ಕೈಕೊಳ್ಳಲಿದೆ. ಜಿಲ್ಲಾಧಿಕಾರಿಗಳು ಮತ್ತು ಪೊಲೀಸು

ಸೂಪರಿಂಟೆಂಡೆಂಟರೇ ಮೊದಲಾದ ಸರ್ಕಾರದ ಹಿರಿಯ ಅಧಿಕಾರಿಗಳು ಈ ಬಗ್ಗೆ ಸದಾ ಕಾಲವೂ ಜಾಗ್ರತರಾಗಿರುವಂತೆ ಮತ್ತು ಹರಿಜನ/ಗಿರಿಜನರಲ್ಲಿ, ಇತರ ದುರ್ಬಲ ವರ್ಗದವರಲ್ಲಿ ಮತ್ತು ಅಲ್ಪ ಸಂಖ್ಯಾತ ವರ್ಗಕ್ಕೆ ಸೇರಿದವರಲ್ಲಿ ಪೂರ್ಣ ಸುರಕ್ಷಾ ಭಾವನೆ ಮೂಡಿ, ಅವರು ತಮ್ಮ ತಮ್ಮ ವೃತ್ತಿಗಳನ್ನು ನಿರ್ಭಯವಾಗಿ ನಡೆಸುವಂಥ ಪರಿಸರ ಏರ್ಪಡಿಸುವಂತೆ ಕಟ್ಟು ನಿಟ್ಟಾದ ಆಜ್ಞೆ ನೀಡಲಾಗುವುದು. ಈ ಜನ ವರ್ಗಗಳಲ್ಲಿ ಆತ್ಮ ವಿಶ್ವಾಸ ಮೂಡಿಸುವ ದಿಶೆಯಲ್ಲಿ ಈ ಹಿರಿಯ ಅಧಿಕಾರಿಗಳು ವಹಿಸಿದ ಪಾತ್ರವನ್ನು ಆಧರಿಸಿ ಅವರ ಕಾರ್ಯ ದಕ್ಷತೆಯನ್ನು ನಿರ್ಧರಿಸಲಾಗುವುದು. ಈ ಜನ ವರ್ಗಗಳ ಕ್ಷೇಮಾಭಿವೃದ್ಧಿ ಹಾಗೂ ಸುರಕ್ಷೆ ಅವರ ಆದ್ಯ ಕರ್ತವ್ಯ.

ನನ್ನ ಸರ್ಕಾರವು ಹಿಂದುಳಿದ ವರ್ಗಗಳವರಿಗೆ ಸಾಮಾಜಿಕ ನ್ಯಾಯವೊದಗಿಸಲು ಪ್ರಯತ್ನಿಸಿ ಸಂವುದಲ್ಲದೆ ಮಂಡಲ್ ಆಯೋಗದ ಶಿಫಾರಸ್ಸುಗಳನ್ನು ಅಂಗೀಕರಿಸಿ ಜಾರಿಗೆ ತರುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಿದೆ.

ಗ್ರಾಮೀಣ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವ ಕಾರ್ಯಕ್ಕೆ ನನ್ನ ಸರ್ಕಾರವು ವಿಶೇಷ ಆದ್ಯತೆ ನೀಡಲಿದೆ. ಈ ಉದ್ದೇಶಕ್ಕಾಗಿ ನನ್ನ ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡ ಬೇಕೆಂದಿರುವ ಎಲ್ಲ ದೃಢಕಾಯರಿಗೆ ಉದ್ಯೋಗಾವಕಾಶ ಒದಗಿಸುವಂತೆ ಭೂ ಸೇನಾ ವಿಭಾಗವನ್ನು ಪುನಃ ಸಂಘಟಿಸಲು ಯೋಚಿಸಿದೆ. ಈ ಕಾರ್ಯಕ್ರಮವನ್ನು ಜಾರಿಗೊಳಿಸಿದರೆ ಗ್ರಾಮೀಣ ಸಮಾಜಕ್ಕೆ ಪ್ರಯೋಜನವಾಗುವ ಶಾಶ್ವತ ಸ್ವತ್ತುಗಳು ನಿರ್ಮಾಣವಾಗುತ್ತವೆ. ಜೀತ ಕಾರ್ಮಿಕರ ಪುನರ್ವಸತಿ ಮತ್ತು ಪುನರ್ವ್ಯವಸ್ಥೆಗಾಗಿ ಭೂಸೇನಾ ವಿಭಾಗದ ಸೇವೆಯನ್ನು ಪೂರ್ಣವಾಗಿ ಬಳಸಿಕೊಳ್ಳಲಾಗುವುದು. ಬಹು ಸಂಖ್ಯಾತ ಜೀತ ಕಾರ್ಮಿಕರ ಪುನರ್ವಸತಿಯ ಈ ಬೃಹತ್ ಸಮಸ್ಯೆಯನ್ನು ಕಾಲಮಿತಿ ಕಾರ್ಯ ಕ್ರಮದ ಮೇರೆಗೆ ಬಗೆಹರಿಸಬೇಕಾಗಿದೆ.

ರೈತ ಸಂಘಗಳು ಕಾಲಕಾಲಕ್ಕೆ ಸರ್ಕಾರಕ್ಕೆ ತಮ್ಮ ಸಮಸ್ಯೆಗಳನ್ನು ಕುರಿತು ಮನವಿ ಸಲ್ಲಿಸಿವೆ. ಆ ದಿಶೆಯಲ್ಲಿ ಈ ವರೆಗೆ ನೀಡಬೇಕಾದ ಗಮನ ನೀಡಿದಂತಿಲ್ಲ, ರೈತರ ಈ ಸಮಸ್ಯೆಗಳ ಪರಿಹಾರಕ್ಕೆ ನನ್ನ ಸರ್ಕಾರ ವಿಶೇಷ ಗಮನ ನೀಡಲಿದೆ. ಲಾಭದಾಯಕ ಬೆಲೆ ನೀಡಿಕೆ ಸಂಗ್ರಹಣ ನೀತಿ, ಕೃಷಿ ಉತ್ಪನ್ನಗಳ ಮೇಲೆ ಲೆವಿಗಳು ಮತ್ತು ತೆರಿಗೆಗಳು, ಕೃಷಿ ಪರಿಕರಗಳ ಬೆಲೆ ತಗ್ಗಿಸುವುದೇ ಮುಂತಾದ ಅಂಶಗಳನ್ನು ಒಳಗೊಂಡ ಈ ಸಮಸ್ಯೆಗಳನ್ನು ಪರಿಶೀಲಿಸಿ, ಅವುಗಳನ್ನು ಸಾಧ್ಯವಾದಷ್ಟು ಬೇಗನೆ ಪರಿಹರಿಸಲು ಸರ್ವ ಪ್ರಯತ್ನ ಮಾಡಲಾಗುವುದು. ಈ ಸಮಸ್ಯೆಗಳ ಪರಿಹಾರದ ದಿಶೆಯಲ್ಲಿ ನನ್ನ ಸರ್ಕಾರವು ಈಗಾಗಲೇ ರೈತ ಸಂಘಗಳ ಪ್ರತಿನಿಧಿಗಳೊಂದಿಗೆ ಮಾತುಕತೆ ಪ್ರಾರಂಭಿಸಿದೆ.

ಆಡಳಿತದ ಎಲ್ಲ ಹಂತಗಳಲ್ಲೂ ಕನ್ನಡಕ್ಕೆ ಆಗ್ರಸ್ಥಾನ ನೀಡಲಾಗುವುದು. ವಿಧಾನ ಮಂಡಲದಲ್ಲಿ ಮಂಡಿಸುವ ಎಲ್ಲ ವಿಧೇಯಕಗಳನ್ನು ಕನ್ನಡದಲ್ಲೂ ಸಿದ್ಧಪಡಿಸಲಾಗುವುದು. ಕನ್ನಡ ಭಾಷೆ ಬಾರದಿರುವ ಎಲ್ಲ ಸರ್ಕಾರಿ ನೌಕರರು, ಸರ್ಕಾರವು ಗೊತ್ತುಪಡಿಸಿದ ಅವಧಿಯೊಳಗೆ ಕನ್ನಡ ಭಾಷೆಯನ್ನು ಕಲಿಯಲೇಬೇಕು. ಕರ್ನಾಟಕ ಲೋಕ ಸೇವಾ ಆಯೋಗವು ನಡೆಸುವ ಪರೀಕ್ಷೆಗಳನ್ನು ಕನ್ನಡದಲ್ಲೇ ನಡೆಸುವಂತೆ ಕ್ರಮ ಕೈಕೊಳ್ಳಲು ಆಯೋಗವನ್ನು ಕೇಳಿಕೊಳ್ಳಲಾಗುವುದು. ಕನ್ನಡವು ಮಾತೃಭಾಷೆಯಲ್ಲದ ಸರ್ಕಾರಿ ನೌಕರರು ಕನ್ನಡದಲ್ಲಿ ವಿಶೇಷ ಪ್ರಾವೀಣ್ಯತೆ ಪಡೆದರೆ ಅವರಿಗೆ ಸೂಕ್ತ ಪುರಸ್ಕಾರ ನೀಡಲಾಗುವುದು.

ಶಿಶುವಿಹಾರದಿಂದ ಪ್ರಾರಂಭಿಸಿ, ಪ್ರತಿಯೊಬ್ಬರಿಗೂ ಕನ್ನಡ ಕಲಿಸಲು ಪ್ರಯತ್ನಿಸಲಾಗುವುದು ಮತ್ತು ಸ್ನಾತಕೋತ್ತರ ವ್ಯಾಸಂಗ ಕ್ರಮಗಳಲ್ಲೂ ಕನ್ನಡ ಮಾಧ್ಯಮವನ್ನು ಪ್ರಾರಂಭಿಸಲು ಕ್ರಮ ಕೈಕೊಳ್ಳಲಾಗುವುದು ಇನ್ನು ಮುಂದೆ ಇಂಗ್ಲೀಷ್ ಮಾಧ್ಯಮ ಶಾಲೆಗಳಿಗೆ ಯಾವುದೇ ಪ್ರೋತ್ಸಾಹ ನೀಡಲಾಗುವುದಿಲ್ಲ. ಕನ್ನಡ ಮಾಧ್ಯಮ ಶಾಲೆಗಳನ್ನು ಪ್ರಾರಂಭಿಸಲು ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುವುದು. ರಾಜ್ಯದಲ್ಲಿ ಪ್ರಚಲಿತವಿರುವ ಎಲ್ಲ ಅಲ್ಪಸಂಖ್ಯಾತ ಭಾಷೆಗಳಿಗೆ ಪೂರ್ಣ ರಕ್ಷಣೆ ನೀಡಲಾಗುವುದು.

ಉರ್ದು, ತಮಿಳು, ತೆಲುಗು, ಮಲೆಯಾಳಿ, ಮರಾಠಿ, ಗುಜರಾತಿ, ಹಿಂದಿ ಅಥವಾ ಯಾವುದೇ ಇತರ ಭಾರತೀಯ ಭಾಷೆಯು ಮಾತೃಭಾಷೆಯಾಗಿರುವವರಿಗೆ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಅವರ ಮಾತೃಭಾಷೆಯಲ್ಲಿಯೇ ಶಿಕ್ಷಣ ನೀಡಲು ಸಕಲ ಸೌಕರ್ಯಗಳನ್ನು ಒದಗಿಸ ಲಾಗುವುದು. ಭಾಷಾ ಹಾಗೂ, ಇತರ ಅಲ್ಪಸಂಖ್ಯಾತರಿಗೆ ಸಂವಿಧಾನದಲ್ಲಿ ಉಪಬಂಧಿಸಿರುವ

ಎಲ್ಲ ಹಕ್ಕುಗಳನ್ನು ಮತ್ತು ರಕ್ಷಣೆಯನ್ನು ಯಥಾರ್ಥವಾಗಿ ಒದಗಿಸಲು ನನ್ನ ಸರ್ಕಾರವು ಬದ್ಧವಾಗಿದೆ.

ಗಣಕ ಯಂತ್ರಗಳನ್ನು ಬಳಸಿ ಉದ್ಯೋಗ ವಿನಿಮಯ ಕೇಂದ್ರಗಳ ಕಾರ್ಯದಲ್ಲಿ ಸುಧಾರಣೆ ತರಲಾಗುವುದು. ಈ ಕೇಂದ್ರಗಳಲ್ಲಿ ನಡೆಯುವ ಆವ್ಯವಸ್ಥೆಯನ್ನು ಕುರಿತ ಎಲ್ಲ ದೂರುಗಳನ್ನು ಬಗೆಹರಿಸಲಾಗುವುದು. ಉದ್ಯೋಗ ವಿನಿಮಯ ಕೇಂದ್ರಗಳು ಉದ್ಯೋಗ ಬಯಸುವವರ ನೋಂದಣಿ ಮಾಡುವ ಕೇಂದ್ರಗಳಷ್ಟೇ ಅಲ್ಲ. ಅಂಥ ಕೇಂದ್ರಗಳಲ್ಲಿ ನೋಂದಣಿ ಮಾಡಿಸಿದ ಯುವಕರಿಗೆ ಮಾರ್ಗದರ್ಶನ ಮತ್ತು ಉದ್ಯೋಗ ಸಲಹೆ ನೀಡುವ ಕೇಂದ್ರಗಳೂ ಆಗಬೇಕು.

ಹೈಸ್ಕೂಲು ಮತ್ತು ಕಾಲೇಜು ಶಿಕ್ಷಣ ಮುಗಿಸಿರುವ ನಮ್ಮ ಅಸಂಖ್ಯಾ ಯುವಕರಲ್ಲಿ ಅನೇಕರಿಗೆ ಉದ್ಯೋಗವಿಲ್ಲದ ದುರದೃಷ್ಟವಶಾತ್, ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ, ಅಂಚೆ ಮತ್ತು ತಂತಿ ಇಲಾಖೆ, ಸಶಸ್ತ್ರದಳ, ಪಾರಾ ಮಿಲಿಟರಿ ದಳ ಮುಂತಾದವುಗಳಲ್ಲೂ ಮತ್ತು ನಮ್ಮ ರಾಜ್ಯದಲ್ಲಿರುವ ಕೇಂದ್ರ ಸರ್ಕಾರಿ ಪಲಯದ ಔದ್ಯಮಿಕ ಸಂಸ್ಥೆಗಳಲ್ಲೂ ಲಭ್ಯವಿರುವ ರಾಷ್ಟ್ರೀಯ ನೌಕರಿ ಕ್ಷೇತ್ರದಲ್ಲಿ ನಮ್ಮ ರಾಜ್ಯಕ್ಕೆ ನ್ಯಾಯೋಚಿತವಾಗಿ ಸಲ್ಲಬೇಕಾದ ಪಾಲು ಸಂದಿಲ್ಲ. ನನ್ನ ಸರ್ಕಾರವು ನಮ್ಮ ಯುವ ಜನರಿಗೆ ನ್ಯಾಯವಾಗಿ ದೊರೆಯಬೇಕಾಗಿರುವ ನೌಕರಿಗಳು ದೊರೆಯುವಂತೆ ಮಾಡುವ ಸಲುವಾಗಿ, ಮಾರ್ಗದರ್ಶನ ಮತ್ತು ತರಬೇತಿ ನೀಡಿ ಅವರು ಇತರರೊಂದಿಗೆ ಸ್ಪರ್ಧಿಸಿ ನೌಕರಿ ಪಡೆಯಲು ಅನುಕೂಲವಾಗುವಂತೆ ಸೂಕ್ತ ಕ್ರಮ ಕೈಕೊಳ್ಳಲಿದೆ.

ವಿವಿಧ ಕಾರ್ಮಿಕ ವಿವಾದಗಳು ತಿಂಗಳುಗಟ್ಟಲೆ ಇತ್ಯರ್ಥವಾಗದ ಮುಂದುವರಿಯುತ್ತಿರುವ ಈಗಿನ ಪರಿಸ್ಥಿತಿ ಮತ್ತೂ ಮುಂದುವರಿಯದಂತೆ ನೋಡಿಕೊಳ್ಳಲಾಗುವುದು. ಆದಷ್ಟು ಬೇಗನೆ ಮತ್ತು ನಿರ್ದಿಷ್ಟ ಅವಧಿಯೊಳಗಾಗಿ ಅಂಥ ಪ್ರತಿಯೊಂದು ವಿವಾದವನ್ನು ಪರಿಹರಿಸಲು ಸರ್ವ ಪ್ರಯತ್ನ ಮಾಡಲಾಗುವುದು. ಅಧಿಕ ಉತ್ಪಾದನೆಯೇ ಎಲ್ಲ ಕಾರ್ಮಿಕ ಸಮಸ್ಯೆಗಳಿಗೆ ಅತ್ಯುತ್ತಮ ಪರಿಹಾರ ವೆಂಬುದನ್ನು ಮನಗಂಡು ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕ ಪ್ರತಿನಿಧಿಗಳು ಕಾರ್ಮಿಕ ಸಮಸ್ಯೆಗಳ ಪರಿಹಾರದ ಈ ದಿಶೆಯಲ್ಲಿ ನನ್ನ ಸರ್ಕಾರವು ಕೈಕೊಂಡ ಧ್ಯೇಯ ಸಾಧನೆಗೆ ಸಂಪೂರ್ಣ ಸಹಕಾರ ನೀಡಬೇಕಾಗಿ ಅಪೇಕ್ಷಿಸುತ್ತೇನೆ.

ಯಾರಿಗೂ ಯಾವುದೇ ಕಷ್ಟ ನಷ್ಟಗಳು ಇರದಂಥ ನವ ಭಾರತ ನಿರ್ಮಾಣದ ಕನಸು ಕಂಡ ಮಹಾತ್ಮಾಗಾಂಧಿಯವರ ಸಾಮಾಜಿಕ ಆರ್ಥಿಕ ಅಭಿವೃದ್ಧಿಯ ತತ್ತ್ವದಲ್ಲಿ ನನ್ನ ಸರ್ಕಾರಕ್ಕೆ ಸಂಪೂರ್ಣ ನಂಬಿಕೆ ಇದೆ. ಈ ಧ್ಯೇಯ ಸಾಧನೆಗಾಗಿಯೇ, ಬಡವರಲ್ಲಿ ಕಡು ಬಡವರನ್ನು ಬಡತನದ ರೇಖೆಯಿಂದ ಮೇಲೆತ್ತುವ ಆಶಯದ ''ಅಂತ್ಯೋದಯ'' ಕಾರ್ಯಕ್ರಮವನ್ನು ನನ್ನ ಸರ್ಕಾರ ಜಾರಿಗೆ ತರಲಿದೆ. ಬಡಜನರ ಹಿತರಕ್ಷಣೆಗಾಗಿ ರೂಪಿಸಲಾದ ಅಂಥ ರಾಷ್ಟ್ರೀಯ ಕಾರ್ಯಕ್ರಮಗಳನ್ನು ನನ್ನ ಸರ್ಕಾರವು ಅತ್ಯಂತ ನಿಷ್ಠೆಯಿಂದ ಮುಂದುವರಿಸಲಿದೆ. ಅಷ್ಟೇ ಅಲ್ಲದೆ ನನ್ನ ಸರ್ಕಾರವು ಸಮಾಜದ ದುರ್ಬಲ ವರ್ಗದವರ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಹಾಗೂ ನಿರ್ದಿಷ್ಟ ಕಾರ್ಯಕ್ರಮವನ್ನು ರೂಪಿಸಿ ಕಾರ್ಯಗತ ಗೊಳಿಸಲಿದೆ.

ಭೂ ಸುಧಾರಣಾ ಕಾರ್ಯಗಳಿಗೆ ಸಂಬಂಧಿಸಿದ ಅನೇಕ ರಿಟ್ ಅರ್ಜಿಗಳು ಇತ್ಯರ್ಥವಾಗದೆ ಇರುವುದರಿಂದ ಭೂ ಸುಧಾರಣಾ ಕಾರ್ಯಕ್ರಮವು ಇನ್ನೂ ಪೂರ್ಣಗೊಂಡಿಲ್ಲ. ಹಾಗೆಯೇ ನ್ಯಾಯಾಲಯಗಳು ನೀಡಿದ ತಡೆಯಾಜ್ಞೆಗಳ ಕಾರಣ ಹೆಚ್ಚುವರಿ ಜಮೀನುಗಳ ಹಂಚಿಕೆ ಕಾರ್ಯವನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ಈ ವ್ಯಾಜ್ಯಗಳು ಆದಷ್ಟು ಬೇಗನೆ ತೀರ್ಮಾನವಾಗುವಂತೆ ಮತ್ತು ಭೂ ಸುಧಾರಣೆಯ ಧ್ಯೇಯವು ಆದಷ್ಟು ಬೇಗನೆ ಕಾರ್ಯಗತವಾಗುವಂತೆ ನೋಡಿಕೊಳ್ಳಲು ನನ್ನ ಸರ್ಕಾರ ಸಕಲ ಪ್ರಯತ್ನಗಳನ್ನು ಮಾಡಲಿದೆ.

ಅತ್ಯಾವಶ್ಯಕ ಸರಕುಗಳ ಬೆಲೆ ಏರಿಕೆ ನನ್ನ ಸರ್ಕಾರಕ್ಕೆ ಅತ್ಯಂತ ಕಳವಳದ ವಿಷಯವಾಗಿದೆ. ಸಾರ್ವಜನಿಕ ವಿತರಣ ವ್ಯವಸ್ಥೆಯ ಮೂಲಕ ಆಹಾರ ಧಾನ್ಯಗಳು ಮತ್ತು ಇತರ ಅತ್ಯಾವಶ್ಯಕ ಸರಕುಗಳು ಸಾಕಷ್ಟು ಪ್ರಮಾಣದಲ್ಲಿ ನ್ಯಾಯಬೆಲೆಗೆ ದೊರೆಯುವಂತೆ ಮಾಡಲು ಕ್ರಮ ಕೈಕೊಳ್ಳಲಾಗುವುದು. ಈ ಉದ್ದೇಶಕ್ಕಾಗಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಲಾಗುವುದು ಮತ್ತು ಸುಧಾರಿಸಲಾಗುವುದು.

ನನ್ನ ಸರ್ಕಾರವು ಲೋಕೋಪಯೋಗಿ ಕಾಮಗಾರಿ ಕಾರ್ಯಕ್ರಮಗಳಾದ ರಸ್ತೆ ನಿರ್ಮಾಣ, ಸೇತುವೆ, ಕಟ್ಟಡಗಳು ಮಂತ್ತು ನೀರಾವರಿ ಹಾಗೂ ವಿದ್ಯುಚ್ಛಕ್ತಿ ಯೋಜನೆಗಳನ್ನು ಸಕಾಲದಲ್ಲಿ ಪೂರ್ಣಗೊಳಿಸಲು ಅತ್ಯಂತ ಮಹತ್ವ ನೀಡುತ್ತದೆ. ಸಾಕಷ್ಟು ಹಣ ಒದಗಿಸಿದ್ದರೂ ಮತ್ತು ವರ್ಷ ವರ್ಷವೂ ಒದಗಿಸಿದ ಆ ಹಣವನ್ನು ಪೂರ್ಣವಾಗಿ ವೆಚ್ಚ ಮಾಡಿದ್ದರೂ, ಆ ವೆಚ್ಚಕ್ಕೆ ತಕ್ಕಂತೆ ಪ್ರಯೋಜನ ದೊರೆತಿಲ್ಲವೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಯೋಜನಾ ಕಾಮಗಾರಿಗಳ ನಿರ್ವಹಣೆಯ ಹೊಣೆ ಹೊತ್ತ ಅಧಿಕಾರಿಗಳು ವೆಚ್ಚಕ್ಕೆ ತಕ್ಕಂತೆ ಪ್ರಯೋಜನ ದೊರೆಯಬೇಕು ಎಂಬ ವಿಚಾರವನ್ನು ಅರಿತುಕೊಳ್ಳುವಂತೆಯೂ, ಹೂಡಿದ ಹಣಕ್ಕೆ ತಕ್ಕಂತೆ ಯಥಾರ್ಥವಾಗಿ ಮತ್ತು ಸಕಾಲದಲ್ಲಿ ಪ್ರಯೋಜನಗಳು ದೊರೆಯುವಂತೆ ಕಾರ್ಯನಿರ್ವಹಿಸಬೇಕೆಂಬುದನ್ನು ಅರಿತುಕೊಳ್ಳುವಂತೆಯೂ ಮಾಡುವುದೂ ನನ್ನ ಸರ್ಕಾರದ ಉದ್ದೇಶ. ಆದಕಾರಣ ನನ್ನ ಸರ್ಕಾರವು ಈಗ ನಡೆಯುತ್ತಿರುವ ಎಲ್ಲ ಕಾಮಗಾರಿಗಳು ಎಂದರೆ ರಸ್ತೆ, ಸೇತುವೆ, ಕಟ್ಟಡ, ನೀರಾವರಿ ಜಲಾಶಯಗಳು ಅಥವಾ ವಿದ್ಯುತ್ ಸ್ಥಾವರಗಳ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಬಗ್ಗೆ ಆದ್ಯ ಗಮನ ನೀಡುತ್ತದೆ. ಹೀಗೆ ಈ ಕಾಮಗಾರಿಗಳು ಸಕಾಲದಲ್ಲಿ ಪೂರ್ಣಗೊಳ್ಳುವಂತೆಯೂ, ವೆಚ್ಚದಲ್ಲಿ ಹೆಚ್ಚಳವುಂಟಾಗದಂತೆಯೂ ಮತ್ತು ಆ ಕಾಮಗಾರಿಗಳಿಗಾಗಿ ವಿನಿಯೋಗಿಸಿದ ಭಾರಿ ಪ್ರಮಾಣದ ಬೊತ್ತಗಳಿಂದ ಸಾರ್ವಜನಿಕರಿಗೆ ಪ್ರಯೋಜನ ದೊರೆಯಲು ಪ್ರಾರಂಭವಾಗುವಂತೆಯೂ ನೋಡಿಕೊಳ್ಳಲಾಗುವುದು. ಭಾರಿ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾರ್ಯವನ್ನು ತೀವ್ರಗೊಳಿಸ ಲಾಗುವುದಲ್ಲದೆ ಸಣ್ಣ ಪ್ರಮಾಣದ ನೀರಾವರಿ ಮತ್ತು ಅಂತರ್ಜಲ ಸಂಪನ್ಮೂಲಗಳ ಪೂರ್ಣ ಪ್ರಯೋಜನ ಪಡೆಯಲು ಗಮನ ನೀಡಲಾಗುವುದು.

ನಾವು ಜಲವಿದ್ಯುತ್ತನ್ನೇ ಅವಲಂಬಿಸಿರುವುದರಿಂದ, ಇಶ್ತೀಚಿಗಿನ ವಿದ್ಯುತ್ ಪೋತಾವೂ ಸೇರಿದಂತೆ ಈ ರೀತಿಯ ವಿದ್ಯುತ್ ಪೋತಾಗಳು ಅನಿವಾರ್ಯವಾಗಿವೆ. ಇಂಥ ಸಂದರ್ಭಗಳುಂಟಾಗ ದಂತೆ ಮಾಡುವ ಸಲುವಾಗಿ ನನ್ನ ಸರ್ಕಾರವು ಔದ್ಯಮಿಕ ಸಂಸ್ಥೆಗಳವರು ತಮಗೆ ಅಗತ್ಯವಿರುವ ವಿದ್ಯುತ್ ಉತ್ಪಾದನೆಗೆ ಬೇಕಾದ ವಿದ್ಯುತ್ ಘಟಕಗಳನ್ನು ಸ್ಥಾಪಿಸಿಕೊಳ್ಳುವಂತೆ ಅವರಿಗೆ ಉತ್ತೇಜನ ನೀಡುವು ದಲ್ಲದೆ, ವಿದ್ಯುತ್ ಸಂರಕ್ಷಣಾ ಕ್ರಮಗಳನ್ನು ಪ್ರಾರಂಭಿಸಲು ನನ್ನ ಸರ್ಕಾರ ಆಲೋಚಿಸಿದೆ. ಈ ತರದ ಯೋಜನೆಗಳನ್ನು ಪ್ರಾರಂಭಿಸುವಂತೆ ಮಾಡಲು ಆಕರ್ಷಕ ಪ್ರೋತ್ಸಾಹಕಗಳನ್ನು ನೀಡಲು ನನ್ನ ಸರ್ಕಾರ ಪರ್ಯಾಲೋಚಿಸುತ್ತಿದೆ. ಅಣುವಿದ್ಯುತ್ ಸ್ಥಾವರವೊಂದನ್ನು ನಮ್ಮ ರಾಜ್ಯದಲ್ಲಿ ಸ್ಥಾಪಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು. ಈ ಬಗ್ಗೆ ಪೂರ್ವಭಾವಿ ಸಮೀಕ್ಷೆ ಈಗಾಗಲೇ ನಡೆದಿದೆ. ಕಡಿಮೆ ವೆಚ್ಚದಲ್ಲಿ ಎಲ್ಲ ಮೂಲಗಳಿಂದ ದೊರೆಯಬಹುದಾದ ವಿದ್ಯುತ್ತನ್ನು ಪಡೆಯುವ ಬಗ್ಗೆ ಚಿಕ್ಕ ಹಾಗೂ ಸಣ್ಣ ಪ್ರಮಾಣದ ಜಲವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸುವುದು ನನ್ನ ಸರ್ಕಾರದ ಆಶಯ ವಾಗಿದೆ. ಹಾಗೆಯೇ ಬಯೋಗ್ಯಾಸು ಸೌರಶಕ್ತಿ ಮುಂತಾದ ವಾಡಿಕೆಯಲ್ಲದ ಶಕ್ತಿ ಮೂಲಗಳನ್ನು ಬಳಸಿಕೊಳ್ಳಲು ಪರೀಕ್ಷಾರ್ಥ ಪ್ರಯೋಗಗಳನ್ನು ನಡೆಸಲು ಪ್ರೋತ್ಸಾಹ ನೀಡಲಾಗುವುದು.

ಗುಡಿ ಕೈಗಾರಿಕೆ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳು ಅಲ್ಪ ವೆಚ್ಚದಲ್ಲಿ ಅಧಿಕ ಜನರಿಗೆ ಉದ್ಯೋಗ ಒದಗಿಸುವುದರಿಂದ ಈ ಕೈಗಾರಿಕೆಗಳ ಅಭಿವೃದ್ಧಿಗೆ ಸರ್ಕಾರ ವಿಶೇಷ ಆದ್ಯತೆ ನೀಡುವುದು. ಸ್ವಯಂ ಉದ್ಯೋಗಕ್ಕಾಗಿ ಅವಕಾಶವನ್ನು ಕಲ್ಪಿಸಲು ವಿಶೇಷ ಪ್ರಯತ್ನ ಮಾಡಲಾಗುವುದು.

ಆಡಳಿತ ವ್ಯವಸ್ಥೆಯು (ಸರ್ಕಾರದ ಕಾರ್ಯನೀತಿಗಳನ್ನು ಅನುಷ್ಠಾನಕ್ಕೆ ತರುತ್ತದೆ. ಸರ್ಕಾರದ ಆಡಳಿತ ವ್ಯವಸ್ಥೆಯು) ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನದ ಸಮರ್ಪಕ ಹಾಗೂ ಪ್ರಭಾವಶಾಲೀ ಸಾಧನವಾಗುವಂತೆ, ಸರ್ಕಾರದ ನೌಕರರೆಲ್ಲರೂ ಜನತೆಗೆ ನಿಷ್ಠೆ, ಪ್ರಾಮಾಣಿಕತೆ ಹಾಗೂ ಸಮರ್ಪಣ ಭಾವದಿಂದ ಸೇವೆ ಸಲ್ಲಿಸುವ ಮನೋಭಾವನೆಯನ್ನು ಅವರಲ್ಲಿ ಮೂಡಿಸಲು ನನ್ನ ಸರ್ಕಾರವು ಎಲ್ಲ ಕ್ರಮ ಕೈಕೊಳ್ಳಲಿದೆ.

ನಮ್ಮ ಸಂಯುಕ್ತ ರಾಷ್ಟ್ರ ವ್ಯವಸ್ಥೆಯಲ್ಲಿ, ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಒಂದೇ ರಾಜಕೀಯ ಪಕ್ಷದ ಸರ್ಕಾರಗಳು ಇರಬೇಕೆಂದೇನೂ ಇಲ್ಲ. ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ವಿಭಿನ್ನ ರಾಜಕೀಯ ಪಕ್ಷಗಳಿಗೆ ಸೇರಿದ ಸರ್ಕಾರಗಳಾಗಿದ್ದರೂ ಅವುಗಳ ನಡುವೆ ಪರಸ್ಪರ ಸಹಕಾರ ಮತ್ತು ತಿಳಿವಳಿಕೆ ಅಪೇಕ್ಷಣೀಯ ಹಾಗೂ ಕಾರ್ಯಸಾಧ್ಯ, ಜನತಾ ಸೇವೆಯ ಮೂಲಭೂತ ಧ್ಯೇಯ ಸಾಧನೆಯ ಮಹತ್ಕಾರ್ಯದಲ್ಲಿ ನನ್ನ ಸರ್ಕಾರ ಕೇಂದ್ರ ಸರ್ಕಾರದ ಸಹಕಾರವನ್ನು ಕೋರುತ್ತದೆ.

ವಿಧಾನಮಂಡಲದ ಹಿಂದಿನ ಅಧಿವೇಶನದ ತರುವಾಯ ಉದ್ಘೋಷಿಸಲಾದ ಅಧ್ಯಾದೇಶಗಳ ಬದಲಾಗಿ ವಿಧೇಯಕಗಳನ್ನು ಮತ್ತು ಸರ್ಕಾರವು ಅವಶ್ಯವೆಂದು ಭಾವಿಸುವ ವಿಧೇಯಕಗಳನ್ನು ತಮ್ಮ ಪರ್ಯಾಲೋಚನೆಗಾಗಿ ಮಂಡಿಸಲಾಗುವುದು.

ನಾನು ಕಳೆದ ಸುಮಾರು ಐನೂವರೆ ವರ್ಷಗಳಿಂದ ಕರ್ನಾಟಕದಲ್ಲಿ ಇದ್ದೇನೆ, ಅನತಿ ಕಾಲದಲ್ಲಿ ನಾನು ದಿಲ್ಲಿಗೆ ಮರಳಬಹುದು. ನನ್ನ ಅಧಿಕಾರಾವಧಿಯಲ್ಲಿ ಕರ್ನಾಟಕದ ಸಮಸ್ತ ಜನತೆ ನನಗೆ ಅಪಾರ ಪ್ರೀತಿವಾತ್ಸಲ್ಯಗಳನ್ನು ತೋರಿದ್ದಾರೆ. ನಾನು ಹಾಗೂ ನನ್ನ ಪತ್ನಿಯು ನಮ್ಮಲ್ಲಿನ ವಾಸ್ತವ್ಯದ ಸವಿ ನೆನಪುಗಳನ್ನು ಎಂದೂ ಮರೆಯುವಂತಿಲ್ಲ. ಕರ್ನಾಟಕ ಜನತೆಯ ಸೇವೆಯೇ ನನ್ನ ಪ್ರಥಮ ಕರ್ತವ್ಯ ವಾಗಿತ್ತು. ಕರ್ನಾಟಕ ಜನತೆಯ ಸಮಸ್ಯೆಗಳ ವಿಚಾರದಲ್ಲಿ ನಾವು ಭಾಗಿಗಳಾಗಿದ್ದ ಕಾರಣ ನಮಗೆ ತುಂಬ ಸಂತೃಪ್ತಿಯುಂಟಾಗಿದೆ. ಕರ್ನಾಟಕ ವಿಧಾನಮಂಡಲದ ಹಿಂದಿನ ಮತ್ತು ಇಂದಿನ ಮಾನ್ಯ ಸದಸ್ಯರು ನನ್ನ ಅಧಿಕಾರಾವಧಿಯ ಕಾಲದಲ್ಲಿ ನನಗೆ ನೀಡಿದ ಸಹಕಾರ, ನನಗೆ ತೋರಿದ ಗೌರವ ಹಾಗೂ ವಾತ್ಸಲ್ಯಗಳ ಬಗ್ಗೆ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ನಿಮಗೂ, ಕರ್ನಾಟಕದ ಸಮಸ್ತ ಜನತೆಗೂ ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಕರ್ನಾಟಕ ರಾಜ್ಯವು ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದೂ ರಾಜ್ಯದ ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತವಾಗಿ ಮುನ್ನಡೆಯಲೆಂದೂ, ತಸ್ಫೂಲಕ ರಾಜ್ಯದ ಜನತೆಯ, ವಿಶೇಷತಃ ಬಡವರ, ಸಮಾಜದ ದೀನ ದಲಿತರ ಆಶೋತ್ತರಗಳು ಈಡೇರಲೆಂದೂ ನಮ್ಮ ನಿರಂತರ ಬಯಕೆ. ದೇವರು ನಮ್ಮ ಕಾರ್ಯಕಲಾಪಗಳಲ್ಲಿ ನಮಗೆ ಮಾರ್ಗದರ್ಶನ ನೀಡಲಿ.

"ಜೈ ಹಿಂದ್"

(ಸಭೆಯು ಬೆ ಗಂಟೆ ೪೦ ನಿಮಿಷಕ್ಕೆ ಪುನಃ ಸೇರಿತು)

[ಶ್ರೀ ಡಿ. ಬಿ. ಚಂದ್ರೇಗೌಡ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು]

ಅಧ್ಯಕ್ಷರು.—ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸಭೆಯ ಮುಂದಿಡುವರು.

Secretary's Report

SECRETARY, LEGISLATURE.—Sir, I lay on the Table of the House a copy of the Address delivered by the Governor.

I also lay on the Table a List of Bills which have received the assent of the Governor or the President as the case may be, subsequent to the last report. *

* Annexure.